**ಎಂ.ವಿ.ಸಿ. ನಂಬರ್ : 39/2024**
**ಪಿ .ಡಬ್ಲ್ಯೂ : 1**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ : 03.03.2025

**ಪಾಟೀ ಸವಾಲು : 2 ನೇ ಎದುರುದಾರರ ಪರವಾಗಿ ಶ್ರೀ ಎಸ್.ಎನ್.ಹೆಚ್ ವಕೀಲರಿಂದ :**

ದಿಃ 28.12.2023 ರಂದು ನಾನು ಸೋಮವಾರಪೇಟೆ ಆಸ್ಪತ್ರೆಯಿಂದ ಬಸ್ ಸ್ಟ್ಯಾಂಡ್ ಗೆ ವಾಪಸ್ಸು ಹೋಗುತ್ತಿದ್ದಾಗ ಅಪಘಾತ ಉಂಟಾಗಿರುತ್ತದೆ. ನಾನು ಆ ದಿನ ಸಾಯಿ ಆಸ್ಪತ್ರೆಗೆ ಹೋಗುತ್ತಿದ್ದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಅಂದರೆ ಸರಿಯಲ್ಲ. ಆ ದಿನ ಗೂಡ್ಸ್ ವಾಹನ ಹಿಂದಿನಿಂದ ಬಂದು ಡಿಕ್ಕಿಪಡಿಸಿದ ಪರಿಣಾಮ ನನ್ನ ಎಡಗಿವಿ, ಕಣ್ಣು ಮತ್ತು ಮೈ ಕೈಗೆ ತೀವ್ರ ಸ್ವರೂಪದ ಗಾಯವಾಗಿರುತ್ತದೆ. ಅಪಘಾತ ನಡೆದ ಸ್ಥಳವು ಜಂಕ್ಷನ್ ಅಂದರೆ ಸರಿ. ನಾನು ಪ್ರಥಮ ಚಿಕಿತ್ಸೆಯನ್ನು ಸೋಮವಾರಪೇಟೆ ಮತ್ತು ಮಡಿಕೇರಿ ಸರ್ಕಾರಿ ಆಸ್ಪತ್ರೆಯಲ್ಲಿ ಪಡೆದು ಹೆಚ್ಚಿನ ಚಿಕಿತ್ಸೆಯನ್ನು ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ಪಡೆದುಕೊಂಡಿರುತ್ತೇನೆ. ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದರಿಂದ ಯಾವುದೇ ಖರ್ಚಾಗಿಲ್ಲ ಅಂದರೆ ಸರಿಯಲ್ಲ. ಅಪಘಾತದಿಂದ ನಾನು ಯಾವುದೇ ಕೆಲಸವನ್ನು ಮಾಡಲು ಸಾಧ್ಯವಿಲ್ಲ ಮತ್ತು ಕಣ್ಣು ಕಾಣುವುದಿಲ್ಲ ಹಾಗೂ ನಡೆಯಲು ಸಾಧ್ಯವಿಲ್ಲ ಎನ್ನುತ್ತಾರೆ. ನನಗೆ ತಿಂಗಳಿಗೆ ರೂ. 35,000/- ವರಮಾನ ಇತ್ತು ಎಂದು ತೋರಿಸಲು ಯಾವುದೇ

ದಾಖಲಾತಿಯನ್ನು ತೋರಿಸಿ ಅಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ 4 ಎಕರೆ ಕಾಫಿ ತೋಟ ಮತ್ತು ಗದ್ದೆ ಇದೆ. ನಾನು ಹಾಜರುಪಡಿಸಿರುವ ಆರ್.ಟಿ.ಸಿಯಲ್ಲಿ ತೋರಿಸಿರುವ ಜಮೀನು ಜಮ್ಮ ಭೂಮಿ ಅಂದರೆ ಸರಿ. ಅದರ ಸರ್ವೆ ನಂಬರ್ ಗೊತ್ತಿಲ್ಲ. ನಿಪಿ-12 ಮತ್ತು 13 ಒಟ್ಟು 10 ಪುಟಗಳಲ್ಲಿ ಇದ್ದು ಕೇವಲ ನಾನು ಒಂದೇ ಪುಟವನ್ನು ಹಾಜರುಪಡಿಸಿರುತ್ತೇನೆ ಅಂದರೆ ಸರಿ. ನಾನು ಹೇಳಿದಷ್ಟು ಆದಾಯ ಇಲ್ಲ ಅಂದರೆ ಸರಿಯಲ್ಲ. ನಾನು ಬಸ್ ಸ್ಟ್ಯಾಂಡ್ ಯಿಂದ ಆಸ್ಪತ್ರೆಗೆ ಹೋಗುವಾಗ ನಾನು ರಸ್ತೆ ದಾಟುವ ಸಂದರ್ಭದಲ್ಲಿ ಅಪಘಾತ ಉಂಟಾಗಿದೆ ಅಂದರೆ ಸರಿಯಲ್ಲ. ಅಪಘಾತಪಡಿಸಿದ ವಾಹನ ಚಾಲಕನಿಗೆ ಪರವಾನಗಿ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ತಪ್ಪಿನಿಂದ ಸದರಿ ಅಪಘಾತ ಉಂಟಾಗಿರುವುದರಿಂದ ನಾನು ಯಾವುದೇ ಪರಿಹಾರವನ್ನು ಪಡೆಯಲು ಅರ್ಹರಲ್ಲ ಅಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ**

**ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ**
**ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.**

ಓ.ಹೇ.ಕೇ.ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
*ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,*
*ಸೋಮವಾರಪೇಟೆ.*